ಕೆ.ಪಿ. ರಾಮಗುಂಡಿ, ಬೈಲಹೊಂಗಲ

ಭಕ್ತಿ ಮತ್ತು ಪ್ರೀತಿ; ಇವುಗಳಲ್ಲಿ ದೇವರಿಗೆ ಯಾವುದನ್ನು ಸಲ್ಲಿಸಬೇಕು?



ಹ್ಞ! 'ಕರ್ಮಣ್ಯಾವಾಧಿಕಾರಸ್ತೇ' ಎಂದವನಿಗೆ ಈ ಎರಡರಿಂದಲೂ ಏನೂ ಆಗಬೇಕಾದ್ದಿಲ್ಲ.

ಮಲ್ಲಿಕಾರ್ಜುನ, ಸುರಧೇನುಪುರ

ಮಾತು ಬೆಳ್ಳಿ, ಮೌನ ಬಂಗಾರ. ಧ್ಯಾನ?

ಬಂಗಾರಕ್ಕೆ ಹಚ್ಚುವ ಪಾಲಿಷ್.

ಭಾರತೀ ಗಂಗಾಧರ್, ಬೆಂಗಳೂರು

ಸುಡುಬಿಸಿಲಿಗೆ ಮುಖ, ದೇಹವೆಲ್ಲ ಕಪ್ಪಾಗುತ್ತೆ. ಆದರೆ ಬಿಳಿಕೂದಲೇಕೆ ಕಪ್ಪಾಗದು?

ಸೂರ್ಯನ ಕಿರಣಗಳಿಗೆ ಬಿಳಿಗೂದಲು ಕಿರಣದಂತೆಯೇ ಕಂಡು ಸ್ವಜಾತಿದ್ವೇಷದಿಂದ ಸ್ಪರ್ಶಿಸದಂತೆ.

ಮಂಡಿ ಕುಮಾರ್, ಬೆಂಗಳೂರು

ಮೊಬೈಲ್ ಇಲ್ಲದ ದೇವಲೋಕದಲ್ಲಿ ಮಾತುಕತೆಯ ಸಂಪರ್ಕ ಹೇಗೆ?



ಎಷ್ಟೇ ನಡೆದರೂ ದಣಿಯದ ನಾರದನ ಮೂಲಕ.

ಬಿದರಹಳ್ಳಿ ನಾಗರಾಜ್, ಹಿರೇಹಡಗಲಿ

ಮನೆಯೂಟಕ್ಕಿಂತ ಹೋಟೆಲ್ ಊಟ ಹೆಚ್ಚು ಪ್ರಿಯವಾಗಿರುತ್ತದೆ. ಏಕೆ?

ಬಡಿಸಿದ್ದು ಗರಂ ಆಗಿರುತ್ತದೆ, ಬಡಿಸುವವರು ಗರಂ ಆಗಿರುವುದಿಲ್ಲ.

ಅನಸೂಯಾ ಟಿ, ಕೇದಿಗೆಮನೆ

ಭ್ರಷ್ಟಾಚಾರ ಕಡಿಮೆಯಾಗಿದೆಯಾ ಅಥವಾ ಜಾಸ್ತಿ ಆಗಿದೆಯಾ ಗುರುವೆ?

ಪಡೆಯುವವರು 'ಬಹಳ ಕಡಿಮೆ ಆಗಿದೆ' ಎನ್ನುತ್ತಿದ್ದಾರೆ.

ಪಿ.ಜೆ. ರಾಘವೇಂದ್ರ, ಮೈಸೂರು

ಸಂಗೀತ ಕಾರ್ಯಕ್ರಮದಲ್ಲೂ ಡೇಂಜರ್ ಝೋನ್ ಬೇಕೆ?

ಪಕ್ಕದವರ ತೊಡೆಯ ಮೇಲೆ ತಾಳ ಹಾಕುವವರಿದ್ದರೆ ಅದು ಡೇಂಜರ್ ಝೋನೇ!

ಎಂ.ಸಿ. ಧನ್ಯತಾ, ಬೆಂಗಳೂರು

'ಆರಂಕುಶವಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿದೇಶಮಂ' ಎಂದ ಪಂಪ ಈಗೇನು ಹೇಳುತ್ತಿದ್ದ?

'ಆರ್ ರಿವಾಲ್ವರಿಟ್ಟೊಡಂ ನೆನೆವುದೆನ್ನ ಮನಂ ಶುದ್ಧೋಚ್ಚಾರದ ಗತದಿನಂ' ಎನ್ನುತ್ತಿದ್ದ.

ವೈದೇಹಿ, ಮೈಸೂರು

ವೃತ್ತಿ ಇದ್ದಾಗ ಪುರುಸೊತ್ತಿಲ್ಲ. ನಿವೃತ್ತಿಯ ನಂತರ ಹೊತ್ತು ಹೋಗೋಲ್ಲ. ಇದಕ್ಕೇನು ಪರಿಹಾರ?

ವೃತ್ತಿಯಲ್ಲಿದ್ದಾಗಲೇ ಪ್ರವೃತ್ತಿಯನ್ನು ಪೋಷಿಸುವುದು.

ಗಂಜಾಂ ನಾಗರಾಜ್, ಮೈಸೂರು

ಅಪ್ಪ ಅಮ್ಮ ಇಬ್ಬರನ್ನೂ ಗೌರವಿಸುವವರು ಈಗಲೂ ಸಿಗುತ್ತಾರೆಯೆ?

ಹೂಂ. ಇಬ್ಬರ ಪಟಕ್ಕೂ ಹಾರ ಹಾಕುತ್ತಾರಲ್ಲ!

ಅಮರಯ್ಯಾ ಪತ್ರಿಮಠ, ಸುರಪುರ

ಸಿರಿಯು ಬಂದೊಡೆ...?

ತೆರಿಗೆ ದೂರವಿಕ್ಕುಮೇ?

ಎಂ.ಜಿ. ಉಮಾ, ಬಳ್ಳಾರಿ

ಸಂದರ್ಭಕ್ಕೆ ತಕ್ಕಂತೆ ಮಾತನಾಡುವವರು ಹಾಗೂ ಅನವಶ್ಯಕವಾಗಿ ಮಾತನಾಡುವವರು ಯಾರು?

ಸಮಯಸಾಧಕರು, ಸುದ್ದಿವಾಹಿನಿಗಳ ಪೆದ್ದು ವರದಿಗಾರರು.

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ

ರಾಜಕೀಯದಲ್ಲಿ ಧರ್ಮ ಇರಬೇಕು, ಧರ್ಮದಲ್ಲಿ ರಾಜಕೀಯ ಇರಬಾರದು ಎಂದರೇನು?

ಪಕ್ಷಾಂತರಿಗೆ ಮಂತ್ರಿಗಿರಿ ಕೊಡಬೇಕು; ಜಗದ್ಗುರುಗಳು 'ನಮ್ಮ ಜಾತಿಯವನನ್ನು ಮಂತ್ರಿಯಾಗಿಸಿ' ಎನ್ನಬಾರದು.

## ಬಹುಮಾನಿತ ಪ್ರಶ್ನೆ

ಎಚ್.ಎಂ.ಎ.ಪಿ. ಮೈಸೂರು

ಅಮ್ಮಂದಿರ ದಿನ ಬಂದ ಮೇಲೆ ಅಪ್ಪಂದಿರ ದಿನ ಬರುತ್ತೆ. ಯಾಕೆ?

ಅಭ್ಯಾಸಬಲ. ಬೀದಿಯಲ್ಲೂ ಮೊದಲು ಕಾಣುವುದು ಹೆಣ್ಣು, ಅವಳ ಹಿಂದೆ ಹಿಂದೆ ಗಂಡು.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

ದುಡ್ಡಿಗಿಂತ ದೊಡ್ಡದು ಯಾವುದು?

ಅದನ್ನು ಕಾಪಾಡಿಕೊಳ್ಳುವುದು.

ಕೆ.ವಿ. ಮಂಜುನಾಥ್, ಕೆ.ಟಿ. ಹಳ್ಳಿ

ಶ್ರೀಲಕ್ಷ್ಮೀನರಸಿಂಹಸ್ವಾಮಿಯ ಶಿರದ ಮೇಲೆ ನಾಗರಹಾವು ತಲೆಯೆತ್ತಿರುವುದು ಏಕೆ?

ಶಿರಕ್ಕಿಂತ ಕೆಳಗೆ ತಲೆಯೆತ್ತಿದರೆ ಅನ್ಯರಿಗೆ ಕಾಣಿಸುವುದಿಲ್ಲವಲ್ಲ!

ಕೆ.ವಿ. ಗೋವಿಂದಾಚಾರಿ, ಮೈಸೂರು

ಗ್ರಂಥಾಲಯಗಳಲ್ಲಿ ದಿನಪತ್ರಿಕೆಗಳನ್ನು, ಪುಸ್ತಕಗಳನ್ನು ಓದಲು ಹೆಚ್ಚಾಗಿ ಪುರುಷರೇ ಬರುವರಲ್ಲ?



ಸ್ತ್ರೀಯರಿಗೆ ಅವರದೇ ಆದ ಗಾಸಿಪ್ ಚಾನಲ್ ಮೂಲಕ ಇವೆಲ್ಲ ಮುಂಚೆಯೇ ತಲುಪಿರುತ್ತವೆ.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ

ಪ್ರೀತಿಸಿದವಳನ್ನು ಪ್ರೇಮದೇವತೆ ಎಂದು ಕರೆಯಬಹುದೆ ಸಾರ್?

ಸ್ತುತಿಸುವುದು, ನೈವೇದ್ಯಗಳನ್ನು ಬಯಸುವಳಾದ್ದರಿಂದ, ಕರೆಯಬಹುದು.

ಡಾ. ಸೀಮಂತಿನಿ ದೇಸಾಯಿ, ಬೆಂಗಳೂರು

ಲಂಚರಾಕ್ಷಸನನ್ನು ವಧಿಸಲು ಯಾವ ದೇವರೂ ಅವತರಿಸುತ್ತಿಲ್ಲವಲ್ಲ?

ಲಂಚಿಗರು ದೇವರನ್ನೂ ಪಾಲುದಾರನನ್ನಾಗಿಸಿಕೊಂಡಿರುವುದು ಕಾರಣವಂತೆ.

■ ರಾಮ್